ಶ್ರೀ ಕೆ. ನಂಗನ ಗೌಡ.—ಒಂದು ತಿಂಗಳು ಅಥವಾ ಎರಡು ತಿಂಗಳು ಅಂತ ಹೇಳಿ ಒಂದು ಕಾಲಮಿತಿ ಹಾಕಲಿಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಆ ಯಂತ್ರ ಇಡಲಿಕ್ಕೆ ಯಾವಾಗ ಕೋಣೆ ತಯಾರಾಗುತ್ತದೆಯೋ ಆ ಕೂಡಲೇ ಕಳುಹಿಸಿಕೊಡುತ್ತೇವೆ. ಮಷಿನು ಕೊಂಡುಕೊಂಡಾಗಿದೆ, ಎಲ್ಲೋ ಒಂದು ಕಡೆ ಇಟ್ಟಿದ್ದಾರೆ, ಪಿ. ಡಬ್ಲ್ಯು. ಡಿ. ಗೆ ಬರೆದಿದ್ದೇವೆ. ಕೋಣೆ ತಯಾರಾದ ಕೂಡಲೇ ಕಳುಹಿಸುತ್ತೇವೆ.

ಶ್ರೀ ಎಂ. ನಾಗಪ್ಪ.—ಬೊಂಬಾಯಿನಲ್ಲಿ ಖರೀದಿ ಮಾಡಿದಂತಹ ಮೇಷಿನ್‌ಗೆ ಟ್ರಾನ್ಸ್ ಪೋರ್ಟೇಷನ್ ಖರ್ಚು ಕೊಡಲಲ್ಲ ಅಂತ ಹೇಳಿ ಅದು ಅಲ್ಲಯೇ ಬೊಂಬಾಯಿ ಸ್ಟೇಷನ್‌ನಲ್ಲಿ ಬಿದ್ದಿದೆ. ಅದಕ್ಕಾಗಿಯೇ ಈ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ನನಗೆ ಗೊತ್ತಿಲ್ಲ, ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ ಎಂದು ಹೇಳುತ್ತೀರಿ. ಇದಕ್ಕೆ ಬೇರೆ ಪ್ರಶ್ನೆ ಹಾಕಬೇಕೇ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಈಗ ಅದು ಬೊಂಬಾಯಿನಲ್ಲಿ ಇದೆಯೋ ಅಥವಾ ಮೈಸೂರಿನಲ್ಲಿದೆಯೋ ಆ ವಿಷಯ ನನಗೆ ಗೊತ್ತಿಲ್ಲ, ಅದಕ್ಕೆ ನೋಟೀಸ್ ಬೇಕು ಎಂದು ಹೇಳಿದ್ದೇನೆ, ಅದರಲ್ಲಿ ತಪ್ಪೇನಿದೆ ? I will get that information in the course of the day, if the Member wants.

ಶ್ರೀ ಎನ್. ಜಿ. ಹಾಲಪ್ಪ.—ಹೊಸ ಮೆಷೀನ್‌ಗೆ ಎಷ್ಟು ದುಡ್ಡು ಕೊಟ್ಟು ಕೊಂಡುಕೊಂಡಿರಿ ? ಅದನ್ನು ಇಲ್ಲಿಯವರೆಗೂ ಕಳುಹಿಸದೇ ಇರುವುದು ಅಧಿಕಾರಿಗಳ ಉದಾಸೀನವೇ, ಸರ್ಕಾರದವರ ಉದಾಸೀನವೇ ಎಂಬುದನ್ನು ತಿಳಿಸುತ್ತೀರಾ ?

Sri Y. RAMAKRISHNA.—I have already assured that the information will be supplied to the Member in the course of the day.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ ಸಾಧಾರಣ 3-4 ವರ್ಷದಿಂದ ಎಕ್ಸ್‌ರೇ ಮೆಷೀನ್ ಇಲ್ಲದೇ ಹೋಗಿ ಅಲ್ಲಿರತಕ್ಕ ರೋಗಿಗಳಿಗೆ ಸಾಕಾಷ್ಟು ತೊಂದರೆಯಾಗುತ್ತಾ ಇದೆ, ಅದಕ್ಕೆ ಏನಾದರೂ ಮಾಡಿ ಒಂದು ಅಥವಾ ಎರಡು ತಿಂಗಳುಗಳೊಳಗೆ ಎಕ್ಸ್‌ರೇ ಮೆಷೀನ್ ಪ್ರೊವೈಡ್ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—3-4 ವರ್ಷಗಳು ಅನ್ನುವುದು ಸತ್ಯಕ್ಕೆ ದೂರವಾದ ಮಾತು, 1968ರಲ್ಲಿ 5 ಸಾವಿರ ರೂಪಾಯಿ ಚಿಲ್ಲರೆ ಕೊಟ್ಟು ಮೆಷೀನ್ ರಿಪೇರಿಗೆ ಕಳುಹಿಸಿದ್ದೇವೆ, ಅಲ್ಲಿ ಸ್ಟೈಕ್ ನಡೆಯುತ್ತಾ ಇದ್ದರೆ ಏನು ಮಾಡುವುದು ! ಅದಷ್ಟು ಬೇಗ ಮೆಷಿನ್ ಕಳುಹಿಸುವ ಏರ್ಪಾಡು ಮಾಡುತ್ತೇವೆ.

Grant of Loan and aid by Khadi Board to Village Industries Society at Tumminakatti

564. Sri N. L. BELLAD (Ranibennur).—

Will the Minister for Development be pleased to state :—

(*a*) the amount of loan and aid granted by the Khadi Board to the Village Industries Society at Tumminakatte, Ranibennur taluk together with the industries for which they were granted and the years of grant ;

(*b*) whether the loan and aid have been appropriated for the purposes and industries for which they were granted (details may kindly be furnished) ?

Sri B. L. GOWDA (Deputy Minister for Co-operation).—

(*a*) The loans and aid given by the Khadi Board are as follows:—

Industry	*Year*	*Loan*	*Grants*
1 Village Oil	From 1963 to 1968	27000·00	1559·30
2 Non-Edible oils and Soap.	During 1963-64	6500·00	1500·00
3 Carpentry and Blacksmithy	During 1963	2500·00	3500·00
4 Khadi	During 1963	8500·00	7350·00

(*b*) Details of appropriation are as follows :—

Industry	*Loan*	*Grants*
1 Village Oil	7800·00	1559·30
2 Non-edible oil and Soap.	Nil	Nil
3 Carpentry and Blacksmithy.	2500·00	3500·00
4 Khadi	1750,00	3607·00

ಶ್ರೀ ಎನ್. ಎಲ್. ಬೆಲ್ಲದ್.—ಎಷ್ಟು ಗಾಣಗಳನ್ನು ಹಾಕಿದ್ದಾರೆ, ಎಷ್ಟು ಎಣ್ಣೆಯನ್ನು ತಯಾರು ಮಾಡಿದ್ದಾರೆ ಮತ್ತು ಆ ಎಣ್ಣೆಯನ್ನು ಮಾರಾಟ ಮಾಡಿದ್ದಾರೆಯೇ ಅಥವಾ ಆ ಸಂಘದಲ್ಲೇ ಸ್ಟಾಕ್ ಇಟ್ಟಿದ್ದಾರೆಯೇ? ಮತ್ತು ಇದೇ ಪ್ರಕಾರ ಮರಗೆಲಸದಲ್ಲಿ ಯಾವ ಯಾವ ಸಾಮಾನನ್ನು ತಯಾರು ಮಾಡಿದ್ದಾರೆ, ಎಷ್ಟು ಕಿಮ್ಮತ್ತಿನ ಸಾಮಾನು ಅದು? ಅವುಗಳು ಮಾರಾಟ ವಾಗಬೇಕಾಗಿದೆಯೇ ಅಥವಾ ಆ ಸಂಘದಲ್ಲಿಯೇ ಇದೆಯೇ? ಮತ್ತು ಕೂನೆಯದಾಗಿ ಖಾದಿ ಎಂದರೆ ಏನು ಅಂತ ಅರ್ಥವಾಗಲಿಲ್ಲ, ದಯವಿಟ್ಟು ಅದರ ವಿವರಣೆ ಕೊಡಬೇಕು.

†ಶ್ರೀ ಬಿ. ಎಲ್. ಗೌಡ.—ಆ ಮಾಹಿತಿ ಇಲ್ಲ, ಸ್ಥೂಲವಾಗಿ ಎಣ್ಣೆಗಾಣಕ್ಕೆ ಎಷ್ಟು ದುಡ್ಡು ಕೊಟ್ಟಿದ್ದೇವೆ. ಮತ್ತು ಖಾದಿಗೆ ಎಷ್ಟು ಕೊಟ್ಟಿದ್ದೇವೆ ಎಂಬುದನ್ನು ಹೇಳಿದ್ದೇವೆ.

ಶ್ರೀ ಎನ್ ಎಲ್. ಬೆಲ್ಲದ್.—ಖಾದಿ ಅನ್ನುವ ಶಬ್ದದ ಅರ್ಥ ವಿವರ ಮಾಡಬೇಕು.

ಶ್ರೀ ಬಿ. ಎಲ್. ಗೌಡ.—ನನಗೆ ತಿಳಿದಿರುವ ಮಟ್ಟಿಗೆ ಖಾದಿ ಎಂದರೆ ಕೈ ಮಗ್ಗದಿಂದ ನೂಲು ನೇಯುವುದು ಖಾದಿ ಅಂತ ತಿಳಿದುಕೊಂಡಿದ್ದೇನೆ.

ಶ್ರೀ ಎನ್. ಎಲ್. ಬೆಲ್ಲದ್.—ಸಾಲ ಮತ್ತು ಧನಸಹಾಯ ಇದನ್ನು ನೋಡಿದರೆ 45 ಸಾವಿರ ರೂಪಾಯಿಗೆ ಮೇಲ್ಪಟ್ಟು ಸಾಲ ಮತ್ತು ಸುಮಾರು 14 ಸಾವಿರ ರೂಪಾಯಿ ಸಬ್ಸಿಡಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಬೇರೆ ಯಾವುದಾದರೂ ಕೆಲಸಕ್ಕೆ ಹಣ ಒದಗಿಸಬೇಕೆಂದರೆ ಸರ್ಕಾರದಲ್ಲಿ ದುಡ್ಡಿಲ್ಲ ಎಂದು ಹೇಳುತ್ತೀರಿ. 1963ರಲ್ಲಿ ಇಷ್ಟೊಂದು ಹಣ ಕೊಟ್ಟಿರುವಾಗ ಅದರಲ್ಲಿ ಅವರು ಕೇವಲ 12 ಸಾವಿರ ರೂಪಾಯಿ ಸಾಲಕ್ಕಾಗಿ ಖರ್ಚು ಮಾಡಿದ್ದಾರೆ. ಖರ್ಚು ಮಾಡಬೇಕಾದ್ದು 1963ರಿಂದ ಇನ್ನೂ 43 ಸಾವಿರ ರೂಪಾಯಿ ಆ ಸಂಘದಲ್ಲಿ ಹಾಗೆಯೇ ಇದೆ. ಅದಕ್ಕೆ ತಾವು ಏನು ಅಭಿಪ್ರಾಯ ಪಡುತ್ತೀರಿ?

ಶ್ರೀ ಬಿ. ಎಲ್. ಗೌಡ.—ಖಾದಿ ಬೋರ್ಡಿನವರು ಹಣವನ್ನು ಈ ಕೈಗಾರಿಕೆಗಳವರಿಗೆ ನೇರ ವಾಗಿ ಕೊಟ್ಟಿಲ್ಲ. ಜಾಯಿಂಟ್ ಡಿಸ್ಟ್ರಿಕ್ಟ್ ಖಾದಿ ಅಂಡ್ ಇಂಡಸ್ಟ್ರೀಸ್ ಅಧಿಕಾರಿಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಸುಪರ್ದಿನಲ್ಲಿ ಹಣವಿದೆ. ಅದನ್ನು ಪಾರ್ಟಿಗಳಿಗೆ ಪಾವತಿ ಮಾಡುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಅಲ್ಲಿ 1963ರಿಂದ ಒಬ್ಬರೂ ಗಾಣವನ್ನು ಹಾಕಿಲ್ಲ. ಆದರೂ ಸಾಲ ಕೊಟ್ಟಿದೆ. ಕೊಟ್ಟ ಸಾಲದಲ್ಲಿ ಎಷ್ಟು ಹಣ ವಸೂಲಾಗಿದೆ?

ಶ್ರೀ ಬಿ. ಎಲ್. ಗೌಡ.—ಕೊಟ್ಟಿರತಕ್ಕ 25 ಸಾವಿರದಲ್ಲಿ 10 ಸಾವಿರ ಮರುಪಾವತಿ ಆಗಿದೆ. ಇನ್ನು 15 ಸಾವಿರ ಉಳಿದಿದೆ.

ಶ್ರೀ ಎನ್. ಎಲ್. ಬೆಲ್ಲದ್.—ಖಾದಿ ಬೋರ್ಡಿನಿಂದ ಉತ್ತರವನ್ನು ತರಿಸಿಕೊಂಡು ಹೇಳುತ್ತಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಹೌದು.

Non-Payment of T. A. and D. A. to Officials in connection with General Election, 1967

672 **Sri N. LOKAYYA NAIK** (Virajpet).—

Will the Minister for Law, Labour and Parliamentary Affairs be pleased to state :—

(*a*) whether travelling and daily allowances to the State Government employees who worked in different places of the State in connection with the General Election, 1967, are in arrears;

(*b*) if so, the number of such officials ;

(*c*) if the said allowances have not been paid, the reason for such a long delay ?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) 415.

(*c*) The reason for such a long delay is the late submission of the bills.

ಶ್ರೀ ಎನ್. ಲೋಕಯ್ಯನಾಯಕ್.—ಡಿಲೇಗೆ ಕಾರಣ ಬಿಲ್ಲುಗಳನ್ನು ಕೊಡುವುದರಲ್ಲಿ ನಿಧಾನವಾಗಿರುವುದೇ ಕಾರಣ ಎನ್ನರಾಗಿದೆ. ಹಾಗಾದರೆ ಬಿಲ್ಲುಗಳನ್ನು ಎಷ್ಟು ತಡವಾಗಿ ಕೊಡಲಾಗಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಉತ್ತರವನ್ನು ಒದಗಿಸುವುದಕ್ಕಾಗುವುದಿಲ್ಲ. ಅವರು ಬೇಗ ಬಿಲ್ಲುಗಳನ್ನು ಒದಗಿಸಿದರೆ ಹಣವನ್ನು ಬೇಗ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎನ್. ಲೋಕಯ್ಯನಾಯಕ್.—ಈ 415 ಜನರ ಟಿ. ಎ. ಮತ್ತು ಡಿ. ಎ. ಬಿಲ್ಲುಗಳಲ್ಲಿ ಇತ್ತೀಚೆಗೆ ಎಷ್ಟು ಸ್ಯಾಂಕ್ಷನ್ ಆಗಿವೆ ?

ಶ್ರೀ ಕೆ. ಪುಟ್ಟಸ್ವಾಮಿ.—ಈ 415 ರಲ್ಲಿ ತುಮಕೂರಿಗೆ ಸಂಬಂಧಪಟ್ಟವು 363, ಹಾಸನಕ್ಕೆ 40, ಚಿತ್ರದುರ್ಗಕ್ಕೆ 9 ಮತ್ತು ಮೈಸೂರಿಗೆ 3 ಹೀಗೆ ಬಾಕಿ ನಿಂತಿವೆ. ಇನ್ನಾವ ಜಿಲ್ಲೆಗಳ ಬಿಲ್ಲುಗಳು ಬಾಕಿ ಉಳಿದಿಲ್ಲ. They have to prefer their bills and get T.A. bills encashed. If they have not prepared in time or if they do not prepare it correctly, naturally there will be delay.

ಶ್ರೀ ಎನ್. ಲೋಕಯ್ಯನಾಯಕ್.—ಕೊಡಗು ಜಿಲ್ಲೆಯ ಕೆಲವು ಬಿಲ್ಲುಗಳು ಕೈ ಬಿಟ್ಟು ಹೋಗಿವೆ, ಅವುಗಳನ್ನು ಇನ್ನೊಮ್ಮೆ ಪರಿಶೀಲನೆ ಮಾಡಿಸುತ್ತೀರಾ ?